# ಮುಂಗಾರಿಗೆ ಮೈದುಂಬಿದ ಜೋಗ

ವೆಂಕಟೇಶ ಜಿ.ಎಚ್.



ಚಿತ್ರ: ಸಂತೋಷ ಕುಮಾರ್ ಕಾರ್ಗಲ್

ಮಲೆನಾಡಿನಲ್ಲಿ ಪುನರ್ವಸು ನಂತರ ಜುಲೈ ಕೊನೆಯ ವಾರ ಪುಷ್ಯ ಮಳೆ ಚುರುಕುಗೊಂಡಿದೆ. ಶರಾವತಿ ಕಣಿವೆಯಲ್ಲಿ ಮುಂಗಾರಿನ ವೈಭವ ಕಳೆಗಟ್ಟಿದೆ. ಇಳೆಮಳೆಯ ನಡುವೆ ಪ್ರೇಮ ರಾಗದ ಉತ್ಕಟತೆಯ ನವಿರುಭಾವ ಆವರಿಸಿದೆ. ವಿಶ್ವಖ್ಯಾತಿಯ ಜೋಗ ಜಲಪಾತದ ಒಡಲು ಜೀವಪಡೆದಿದೆ. ನೋಡುಗರ ಕೈಬೀಸಿ ಕರೆಯುತ್ತಿದೆ.

ಗಾಂಭೀರ್ಯ, ವೈಯಾರ, ಗರ್ವ, ಶರವೇಗವೇ ಧಾರೆಯಾಗಿ ಸುತ್ತಲಿನ ಗಿರಿ ಶ್ರೇಣಿಯಿಂದ ರಾಜಾ, ರಾಣಿ, ರೋರರ್, ರಾಕೆಟ್ ಧುಮ್ಮಿಕ್ಕುತ್ತಿವೆ. ಅವುಗಳ ಕಣ್ತುಂಬಿಕೊಳ್ಳಲು ನಿತ್ಯ ಸಾವಿರಾರು ಪ್ರವಾಸಿಗರು ಜೋಗಕ್ಕೆ ಬರುತ್ತಿದ್ದಾರೆ.

ಮಳೆ–ಮೋಡಗಳ ಹೊಯ್ದಾಟದ ನಡುವೆ ಜಲಪಾತದ ದೃಶ್ಯಕಾವ್ಯಕ್ಕೆ ದೃಷ್ಟಿ ತೆಗೆಯುವಂತೆ ಆಗಾಗ ನೆಲಮುಗಿಲಿನುದ್ದಕ್ಕೂ ಮಂಜಿನ ಪರದೆ ಹರಡುತ್ತದೆ. ಕಾದುಕುಳಿತವರಿಗೆ ಮಾತ್ರ ನೀರ ಹಾದಿಯ ವೈಭವ ಕಣ್ಣಿನ ಪರದೆಗೆ ಆಗಾಗ ದಕ್ಕುತ್ತದೆ.

ಒಮ್ಮೆ ಸರಿದು, ಮತ್ತೊಮ್ಮೆ, ಮಗದೊಮ್ಮೆ ಹರಡುವ ಮಂಜಿನ ದಟ್ಟತೆಯ ನಡುವೆ ಜಲಪಾತದ ನೋಟ ಕಣ್ತುಂಬಿಕೊಳ್ಳುವುದೇ ಸೊಗಸು. ಅಲ್ಲಿ ನಿರೀಕ್ಷೆಯ ಧ್ಯಾನಸ್ಥ ಭಾವ... ಪರದೆ ಸರಿಯದಿದ್ದರೆ ಖಾಲಿತನ... ಹೀಗೆ, ಸ್ಪಷ್ಟ, ಅಸ್ಪಷ್ಟತೆ ನಡುವೆ ನೀರ ಧಾರೆ ಇಡಿಯಾಗಿ ಕಾಣಸಿಕ್ಕರೆ ಮಾತ್ರ ಅದು ನೋಡುಗರಿಗೆ ದೇವರು ರುಜು ಮಾಡಿದ ಹೊತ್ತು.

ಜಲಪಾತದ ಎದುರಿನ ಅಟ್ಟಣಿಗೆಯ ಕಂಬಿಗಳ ಹಿಂದೆ ನಿಂತು ಜಲಧಾರೆಯ ನೆತ್ತಿಯತ್ತ ಕಣ್ಣು, ಕ್ಯಾಮೆರಾ ನೆಟ್ಟು ನಿಂತವರಿಗೆ ಆಗಾಗ ಮಳೆಯ ಮಜ್ಜನದ ಬೋನಸ್. ರಾಜಾ, ರಾಣಿಯ ಪರಿವಾರಕ್ಕಿಂತ ತಾನೇನು ಕಮ್ಮಿಯೇ ಎಂಬಂತೆ ಪಕ್ಕದ ಮಾವಿನಗುಂಡಿ ಜಲಪಾತದ ಬಿಗುಮಾನ ಬೆರೆತ ವೈಯಾರವೂ ಕಣ್ಸೆಳೆಯುತ್ತದೆ.

ಬರೀ ಜೋಗ ಜಲಪಾತದ ಪರಿಸರ ಮಾತ್ರವಲ್ಲ ಪಕ್ಕದ ಕಾರ್ಗಲ್ ಪಟ್ಟಣ, ಸೈನಾ ಗೇಟ್, ಬ್ರಿಟಿಷ್ ಬಂಗ್ಲೊ, ರಾಜಾಕಲ್ಲು, ಸೀತಾಕಟ್ಟೆ, ಮಳಲಿ, ಶಿರೂರು ಕೆರೆ, ಲಿಂಗನಮಕ್ಕಿ, ತಳಕಳಲೆ ಅಣೆಕಟ್ಟೆ ಹೀಗೆ ಶರಾವತಿ ಕೊಳ್ಳದಲ್ಲಿ ದಿನವಿಡೀ ಮೋಡ ಮಳೆ, ಮಂಜು, ಆಷಾಢದ ಸುಳಿಗಾಳಿಯದ್ದೇ ದಿಬ್ಬಣ. ಇಳೆಮಳೆಯ ನಡುವಿನ ಪಿಸುಮಾತಿಗೆ, ಕನವರಿಕೆಗೆ, ಅಪ್ಪುಗೆಗೆ, ಕಚಗುಳಿಗೆ ಸಾಕ್ಷಿಯಾಗುತ್ತೇವೆ. ಥಂಡಿ ಹವೆಯಲ್ಲಿ ಅಗತ್ಯಬಿದ್ದರೆ ಉಪ್ಪು–ಖಾರ ಹಚ್ಚಿದ ಸೌತೆಕಾಯಿ, ಪಾಪ್‌ಕಾರ್ನ್, ಹುರಿದ ಶೇಂಗಾ, ಕಡಲೆ, ಮಸಾಲೆ ಹೊದ್ದ ಮೀನು, ಬಿಸಿ ಕಾಫಿ, ಚಹಾ ಜೊತೆಯಾಗುತ್ತವೆ.

ಪ್ರವಾಸೋದ್ಯಮ ಇಲಾಖೆ ಈಗ ಜೋಗದ ಪರಿಸರಕ್ಕೆ ಹೊಸ ರೂಪ ನೀಡುತ್ತಿದೆ. ಜೋಗದ ಜಲಪಾತದ ಎದುರಿನ ಪ್ರವೇಶದಲ್ಲಿ ದ್ವಾರ ನಿರ್ಮಿಸಿದೆ. ಪ್ರವಾಸಿಗರು ಟಿಕೆಟ್ ಪಡೆದು ಜಲಪಾತದ ವೀಕ್ಷಣೆಗೆ ಒಳಹೋಗಬೇಕಿದೆ. ಕಾಮಗಾರಿ ಇನ್ನೂ ಚಾಲನೆಯಲ್ಲಿರುವುದರಿಂದ ಸಣ್ಣಪುಟ್ಟ ಓರೆಕೋರೆಗಳಿದ್ದರೂ ಜೋಗ ಜಲಪಾತದ ಸಿರಿ ಕಣ್ತುಂಬಿಕೊಳ್ಳಲು ತೊಂದರೆ ಇಲ್ಲ. ಸ್ವಲ್ಪ ಆಚೆ ಕಡೆ ಸಾಗಿದರೆ ಬ್ರಿಟಿಷ್ ಬಂಗ್ಲೊ ಬಳಿಯಿಂದ ಜಲಪಾತದ ಭಿನ್ನ ನೋಟವೂ ಕಾಣಸಿಗುತ್ತದೆ. ರೇನ್‌ಕೋಟ್, ಛತ್ರಿಯ ಸಾಂಗತ್ಯವೂ ಈ ವೇಳೆ ಮುಖ್ಯ.

ಮುಗಿಲ ಹಾದಿಯಿಂದ ಹಾಲ್ನೊರೆಯೇ ನೆಲಕ್ಕೆ ಹರಡಿದಂತೆ ತೋರುವ ಜಲಾಶಯವನ್ನು ನೋಡಲು ವಾರಾಂತ್ಯದಲ್ಲಿ ಪ್ರವಾಸಿಗರ ಜಾತ್ರೆಯೇ ನೆರೆಯುತ್ತಿದೆ.

## ಜೋಗ ಕಣ್ತುಂಬಿಕೊಳ್ಳಲು...

ಜೋಗಕ್ಕೆ ಬರುವ ಪ್ರವಾಸಿಗರು ಸ್ವಂತ ವಾಹನ, ಬಸ್ ಹಿಡಿದು ನೇರವಾಗಿ ಜೋಗಕ್ಕೆ ಬರಬಹುದು. ಶಿವಮೊಗ್ಗಕ್ಕೆ ವಿಮಾನದಲ್ಲಿ ಬಂದು ಅಲ್ಲಿಂದ ಬಾಡಿಗೆ ವಾಹನ ಮಾಡಿಕೊಂಡು ಸಾಗರ ಮಾರ್ಗದಲ್ಲಿ ಜಲಪಾತದ ವೀಕ್ಷಣೆಗೆ ಹೋಗಬಹುದು. ಬೆಂಗಳೂರು–ಮೈಸೂರಿನಿಂದ ನೇರ ರೈಲು ಇದ್ದು, ತಾಳಗುಪ್ಪ ರೈಲು ನಿಲ್ದಾಣಕ್ಕೆ ಬಂದು ಅಲ್ಲಿಂದ ಬಾಡಿಗೆ ಆಟೊ, ಜೀಪುಗಳಲ್ಲಿ ಸಮೀಪದ ಜೋಗಕ್ಕೆ ತೆರಳಬಹುದು. ಶಿರಸಿ–ಸಿದ್ದಾಪುರ ಮಾರ್ಗ, ಹೊನ್ನಾವರದಿಂದ ಘಟ್ಟ ಹತ್ತಿ ಬರುವವರು ಜೋಗದ ಸಿರಿಯ ಕಣ್ತುಂಬಿಕೊಳ್ಳಬಹುದು.

ಮುಂಗಾರು ಚುರುಕುಗೊಂಡು ಜಲಪಾತ ಮೈದುಂಬುತ್ತಿದ್ದಂತೆಯೇ ಪ್ರವಾಸಿಗರ ಸಂಖ್ಯೆ ಹೆಚ್ಚಳಗೊಂಡಿದೆ. ಸುತ್ತಲಿನ ಹೋಟೆಲ್, ರೆಸಾರ್ಟ್, ಹೋಂ ಸ್ಟೇ, ಪ್ರವಾಸಿ ಮಂದಿರ, ಅರಣ್ಯ ಇಲಾಖೆಯ ತಂಗು ಕುಟೀರ ಜೀವಪಡೆದಿವೆ.